

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಪೈಗಂಬರ್(ಸ)ರ ಕಾಲದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–02–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟು ಖೈಬರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಸ್ವಭಾವ ಮತ್ತು ನಡವಳಿಕೆ ಹೇಗಿತ್ತು ಎಂಬುದರ ಪ್ರಸ್ತಾಪ ನಡೆಯುತ್ತಿತ್ತು. ಯುದ್ಧದ ನಂತರ ಯಹೂದಿಯರು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಸಂಚು ಹಾಕಿದ್ದರು. ವಿಷಬೆರೆಸಿದ ಆಡಿನ ಮಾಂಸವನ್ನು ತಿನ್ನಿಸಲು ಪ್ರಯತ್ನಿಸಲಾಗಿತ್ತು. ಇದರ ವಿವರಣೆ ಹೀಗಿದೆ: ಖೈಬರ್ ಯುದ್ಧದ ವಿಜಯ ಮತ್ತು ಯಹೂದಿಯರ ಹೀನಾಯ ಸೋಲಿನ ನಂತರ ಹಝ್ರತ್ ಪೈಗಂಬರ್(ಸ) ಎಷ್ಟು ಕೃಪೆ ಮತ್ತು ಕರುಣೆ ತೋರಿಸಿದರು ಎಂದರೆ, ಹಝ್ರತ್ ಪೈಗಂಬರ್(ಸ) ಯಹೂದಿಯರನ್ನು ಕ್ಷಮಿಸಿದರು ಮಾತ್ರವಲ್ಲ, ಅವರನ್ನು ಖೈಬರ್‌ನಲ್ಲಿ ವಾಸಿಸಲು ಅನುಮತಿ ನೀಡಿದರು. ಜನರು ನೆಮ್ಮದಿಯಿಂದ ಇರುತ್ತಿದ್ದಾಗ ಒಂದು ದಿನ ಯಹೂದಿಯರ ಸರದಾರ ಸಲಾಂ ಬಿನ್ ಮಶ್ಕಮ್‌ನ ಪತ್ನಿ ಝೈನಬ್ ಬಿನ್ತ್ ಹಾರಿಸ್ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ವಿಷಪೂರಿತ ಆಡಿನ ಮಾಂಸವನ್ನು ಇರಿಸುತ್ತಾ 'ನಿಮಗಾಗಿ ಕಾಣಿಕೆಯಾಗಿ ತಂದಿದ್ದೇನೆ' ಎಂದು ಹೇಳಿದಳು. ಈ ಸಂಚಿನಲ್ಲಿ ಈ ಮಹಿಳೆಯೊಬ್ಬಳು ಮಾತ್ರ ಇದ್ದಿರಲಿಲ್ಲ. ಬದಲಾಗಿ ಬೇರೆ ಕೆಲವು ಜನರು ಕೂಡ ಇದ್ದರು.

ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಮಾಂಸವನ್ನು ಅವರ ಮುಂದೆ ಇರಿಸಲಾಯಿತು. ಹಝ್ರತ್ ಬಿಶ್ರ್ ಬಿನ್ ಬರಾಅ(ರ) ಕೂಡ ಕೆಲವು ಇತರ ಸಹಾಬಿಯರ ಜೊತೆಗೆ ಅಲ್ಲಿದ್ದರು. ಹಝ್ರತ್ ಪೈಗಂಬರ್(ಸ) ಅದರಿಂದ ಸ್ವಲ್ಪ ತೆಗೆದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರೂ ತಿನ್ನಬೇಡಿರಿ. ಏಕೆಂದರೆ ಇದರಲ್ಲಿ ವಿಷ ಮಿಶ್ರಿತವಾಗಿದೆ ಎಂದು ಮಾಂಸ ಸ್ವತಃ ಹೇಳುತ್ತಿದೆ. ಹಝ್ರತ್ ಬಿಶ್ರ್ ಬಿನ್ ಬರಾಅ(ರ) ಹೇಳಿದರು: ನಾನು ಅದನ್ನು ಸೇವಿಸಿದಾಗ ನನಗೆ ಅದರಲ್ಲಿ ಏನೋ ಮಿಶ್ರಿತವಾಗಿದೆ ಎಂದು ಅನಿಸುತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರ ಆಹಾರ ಸೇವನೆಗೆ ಅಡ್ಡಿಯಾಗದಿರಲಿ ಎಂದು ಭಾವಿಸಿ ನಾನು ಏನೂ ಹೇಳಿರಲಿಲ್ಲ. ಆದರೆ ಹಝ್ರತ್ ಪೈಗಂಬರ್(ಸ) ಬಾಯಿಗೆ ಹಾಕಿದ್ದನ್ನು ಉಗುಳಿದಾಗ ನನಗೆ ನನಗಿಂತ ಹೆಚ್ಚು ಹಝ್ರತ್ ಪೈಗಂಬರ್(ಸ)ರ ಬಗ್ಗೆ ಚಿಂತೆ ಉಂಟಾಯಿತು. ಆದರೆ ತಾವು ಅದನ್ನು ನುಂಗುವುದಕ್ಕೆ ಬದಲಾಗಿ ಉಗುಳಿದಿರಿ ಎಂಬ ಕಾರಣದಿಂದ ನಾನು ಸಮಾಧಾನಗೊಂಡೆನು. ಹಝ್ರತ್ ಬಿಶ್ರ್(ರ) ತಾನು ಕುಳಿತಿದ್ದ ಜಾಗದಿಂದ ಎದ್ದಿರಲಿಲ್ಲ. ಅಷ್ಟರಲ್ಲೇ ಅವರ ದೇಹದ ಬಣ್ಣ ಬದಲಾಗಲು ತೊಡಗಿತು. ಅನಂತರ ಎಷ್ಟು ರೋಗಗ್ರಸ್ತರಾದರು ಎಂದರೆ, ಸ್ವತಃ ಮಗ್ಗಲು ಬದಲಾಯಿಸಲು ಕೂಡ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಸುಮಾರು ಒಂದು ವರ್ಷದ ನಂತರ ಅವರು ನಿಧನರಾದರು. ಕೆಲವು ವರದಿಗಳ ಪ್ರಕಾರ ಹಝ್ರತ್ ಬಿಶ್ರ್(ರ) ತನ್ನ ಜಾಗದಿಂದ ಎದ್ದೇಳಲು ಸಾಧ್ಯವಾಗದೇ ಅಲ್ಲೇ ನಿಧನಗೊಂಡರು ಎಂದಿದೆ. ಹಝ್ರತ್ ಪೈಗಂಬರ್(ಸ) ಆ ಮಹಿಳೆಯನ್ನು ಕರೆದು ಕೇಳಿದರು: ಈ ಕೃತ್ಯವನ್ನು ಮಾಡಲು ನಿನ್ನೊಡನೆ ಹೇಳಿದ್ದು ಯಾರು? ಆ ಮಹಿಳೆ ಹೀಗೆ ಉತ್ತರಿಸಿದಳು: ನೀವು ಅರಸನಾಗಿದ್ದೀರಿ ಎಂದಾದರೆ ನಾವು ನಿಮ್ಮಿಂದ ಬಿಡುಗಡೆ ಪಡೆಯುವೆವು ಅಥವಾ ನೀವು ಪ್ರವಾದಿ ಎಂದಾದರೆ ಇದರ ಬಗ್ಗೆ ನಿಮಗೆ ಅರಿವು ಲಭಿಸುವುದು ಎಂದು ನಾನು ಯೋಚಿಸಿದೆ. ಹಝ್ರತ್ ಪೈಗಂಬರ್(ಸ) ಆ ಮಹಿಳೆಯನ್ನು ಕ್ಷಮಿಸಿದರು. ಮತ್ತೊಂದು ವರದಿಯ ಪ್ರಕಾರ ಬಿಶ್ರ್ ಬಿನ್ ಬರಾಅ(ರ) ಶಹೀದ್ ಆದ ನಂತರ ಅವಳನ್ನು ವಧಿಸಲಾಯಿತು. ಆದರೆ ಸಹೀಹ್ ಬುಖಾರಿಯ ಒಂದು ವರದಿಯ ಪ್ರಕಾರ ಆ ಮಹಿಳೆಯನ್ನು ವಧಿಸಲಾಗಿರಲಿಲ್ಲ.

ಸಹೀಹ್ ಬುಖಾರಿಯಲ್ಲಿ ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಕೊನೆಯ ದಿನಗಳಲ್ಲಿ ಹೀಗೆ ಹೇಳುತ್ತಿದ್ದರು: ಹೇ ಆಯಿಶಾ, ನಾನು ಖೈಬರ್‌ನಲ್ಲಿ ತಿಂದ ಆಹಾರದ ತೊಂದರೆಯನ್ನು ನಾನು ಯಾವಾಗಲೂ ಅನುಭವಿಸುತ್ತಿರುವೆನು. ಈಗಲೂ ಆ ವಿಷದಿಂದ ನನ್ನ ನರಗಳು ಮುರಿದುಹೋಗುವುದಾಗಿ ಅನುಭವಿಸುತ್ತಿರುವೆನು. ಕೆಲವು ವ್ಯಾಖ್ಯಾನಗಾರರು ಇದೇ ಕಾರಣದಿಂದ ಹೀಗೆ ಹೇಳಿರುವರು: ಹಝ್ರತ್ ಪೈಗಂಬರ್(ಸ)ರ ಮರಣ ಖೈಬರ್‌ನಲ್ಲಿ ಸೇವಿಸಿದ ವಿಷದಿಂದ ಆಗಿತ್ತು. ಹೀಗೆ ಅವರು ಶಹೀದ್ ಆಗಿರುವರು ಮತ್ತು ಅವರು ಅತ್ಯಂತ ಶ್ರೇಷ್ಠ ಶಹೀದ್ ಆಗಿರುವರು.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ)ರಿಗಾಗಿ ಇಷ್ಟು ಕಷ್ಟಪಡಬೇಕಾದ ಅಗತ್ಯವೇನೂ ಇಲ್ಲ. ಪ್ರವಾದಿಯು ಆ ಸ್ಥಾನವನ್ನು ಮೊದಲೇ ಹೊಂದಿರುತ್ತಾರೆ. ಅವರು ಸಿದ್ದೀಖ್ ಸಹ ಆಗಿರುತ್ತಾರೆ. ಶಹೀದ್ ಸಹ ಆಗಿರುತ್ತಾರೆ. ಆ ವಿಷದಿಂದ ರಕ್ಷಣೆ ಪಡೆದದ್ದನ್ನು ಯಹೂದಿಯರು ಅದ್ಭುತವೆಂದೂ ಹಝ್ರತ್ ಪೈಗಂಬರ್(ಸ) ಸುಳ್ಳು ಪ್ರವಾದಿಯಲ್ಲ ಎಂಬುದಕ್ಕೆ ಪುರಾವೆಯೆಂದೂ ಭಾವಿಸುತ್ತಾರೆ. ಆದರೆ ಕೆಲವು ಮುಸ್ಲಿಮರು ಆ ವಿಷದಿಂದ ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂದು ಸಾಬೀತುಪಡಿಸಲು ಪ್ರಯತ್ನಿಸುತ್ತಾರೆ. ಹಝ್ರತ್ ಪೈಗಂಬರ್(ಸ)ರ ಮರಣ ಖಂಡಿತವಾಗಿಯೂ ಈ ವಿಷದ ಕಾರಣದಿಂದ ಆಗಿರಲಿಲ್ಲ. ಅದು ಕೇವಲ ಒಂದು ನೋವಿನ ಅನುಭವವಾಗಿತ್ತು.

ಖೈಬರಿನ ಯುದ್ಧದಲ್ಲಿ ಹಝ್ರತ್ ಸಫಿಯ(ರ)ರ ವಿವಾಹದ ಪ್ರಸ್ತಾಪ ಸಹ ಲಭಿಸುತ್ತದೆ. ಖೈಬರಿನಲ್ಲಿ ಯುದ್ಧ ಕೈದಿಗಳನ್ನು ಒಟ್ಟುಗೂಡಿಸಲಾದಾಗ ಹಝ್ರತ್ ದಹಿಯ(ರ) ಹಝ್ರತ್ ಪೈಗಂಬರ್(ಸ)ರ ಅನುಮತಿಯಿಂದ ಹುಯ್ಯ್ ಬಿನ್ ಅಖ್ತಬ್‌ನ ಪುತ್ರಿಯಾದ ಸಫಿಯ(ರ)ರನ್ನು ಪಡೆದರು. ಆಗ ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಹೇಳಿದರು: ಹುಯ್ಯ್ ಬಿನ್ ಅಖ್ತಬ್‌ನ ಪುತ್ರಿ ಬನೂ ಖುರೈಝ ಮತ್ತು ಬನೂ ನಝೀರಿನ ರಾಜಕುಮಾರಿಯಾಗಿದ್ದಾರೆ. ಅವರು ನಿಮಗಲ್ಲದೇ ಬೇರೆ ಯಾರಿಗೂ ಅನುಯೋಜ್ಯಳಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಅವರನ್ನು ಕರೆದುಕೊಂಡು ಬನ್ನಿರಿ. ಅನಂತರ ಹಝ್ರತ್ ಪೈಗಂಬರ್(ಸ) ದಹಿಯ(ರ)ರೊಡನೆ ಹೇಳಿದರು: ಅವರ ಬದಲಿಗೆ ಬೇರೆ ಯಾರನ್ನಾದರೂ ಪಡೆದುಕೊಳ್ಳಿರಿ. ಹಝ್ರತ್ ಪೈಗಂಬರ್(ಸ) ಸಫಿಯ(ರ)ರನ್ನು ಸ್ವತಂತ್ರಗೊಳಿಸಿದರು. ಮುಸ್ನದ್ ಅಹ್ಮದ್ ಬಿನ್ ಹಂಬಲ್‌ನ ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಸಫಿಯ(ರ)ರನ್ನು ಸ್ವತಂತ್ರಗೊಳಿಸುತ್ತಾ ಹೀಗೆ ಹೇಳಿದರು: ನಾನು ನಿನ್ನನ್ನು ಸ್ವತಂತ್ರಗೊಳಿಸಿರುವೆನು. ಬೇಕಾದರೆ ನೀನು ನನಗೆ ವಿವಾಹವಾಗು ಅಥವಾ ಬೇಕಾದರೆ ನಿನ್ನ ಗೋತ್ರದ ಕಡೆಗೆ ಮರಳಿ ಹೋಗು. ಆಗ ಹಝ್ರತ್ ಸಫಿಯ(ರ) ಹಝ್ರತ್ ಪೈಗಂಬರ್(ಸ)ರ ಜೊತೆಗೆ ವಿವಾಹವಾಗಲು ಇಷ್ಟಪಟ್ಟರು.

ಖೈಬರಿನ ಎಲ್ಲ ಕಾರ್ಯಗಳನ್ನು ಮುಗಿಸಿದ ನಂತರ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೊರಟರು ಮತ್ತು ಆರು ಮೈಲುಗಳನ್ನು ದಾಟಿದ ನಂತರ ಹಝ್ರತ್ ಸಫಿಯ(ರ)ರೊಡನೆ ಇರುವ ವಿವಾಹವನ್ನು ಪೂರ್ತಿಗೊಳಿಸಲು ಹಝ್ರತ್ ಪೈಗಂಬರ್(ಸ) ತಂಗಲು ಬಯಸಿದರು. ಆದರೆ ಹಝ್ರತ್ ಸಫಿಯ(ರ) ಬಯಸಿದಂತೆ ಹಝ್ರತ್ ಪೈಗಂಬರ್(ಸ) ಯಾತ್ರೆಯನ್ನು ಮುಂದುವರಿಸಿದರು. ಅನಂತರ ಸುಮಾರು 12 ಮೈಲು ದೂರವನ್ನು ದಾಟಿದ ನಂತರ ತಂಗಿದರು. ಅಲ್ಲಿ ಹಝ್ರತ್ ಸಫಿಯ(ರ)ರೊಡನೆ ವಿವಾಹ ನಡೆಯಿತು. ಹಝ್ರತ್ ಸಫಿಯ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಖೈಬರಿನ ಬಹಳ ಸಮೀಪದಲ್ಲಿ ತಂಗಲು ಬಯಸುತ್ತಿದ್ದರು. ಆದರೆ ನನ್ನ ಸಮುದಾಯ ಹಝ್ರತ್ ಪೈಗಂಬರ್(ಸ)ರಿಗೆ ಏನಾದರೂ ಹಾನಿ ಮಾಡಬಹುದು ಎಂಬ ಭಯ ನನಗೆ ಇತ್ತು. ಆದ್ದರಿಂದ ನಾನು ಅಲ್ಲಿ ತಂಗುವ ಬದಲು ಸ್ವಲ್ಪ ದೂರದಲ್ಲಿ ತಂಗಲು ವಿನಂತಿಸಿಕೊಂಡೆ. ಹಝ್ರತ್ ಪೈಗಂಬರ್(ಸ)ರ ಶ್ರೇಷ್ಠ ಸ್ವಭಾವಗುಣಗಳ ಪ್ರಭಾವದಿಂದಲೇ ಹಝ್ರತ್ ಸಫಿಯ(ರ)ರಿಗೆ ಪೂರ್ತಿ ಲೋಕದಲ್ಲಿ ಹಝ್ರತ್ ಪೈಗಂಬರ್(ಸ)ರಿಗಿಂತ ಹೆಚ್ಚು ಯಾರೂ ಪ್ರಿಯರಾಗಿರಲಿಲ್ಲ.

ಹಝ್ರತ್ ಪೈಗಂಬರ್(ಸ)ರ ಡೇರೆಯ ಹೊರಗೆ ಹಝ್ರತ್ ಅಬೂಅಯ್ಯೂಬ್ ಅನ್ಸಾರಿ(ರ) ಕಾವಲು ನಿಂತ ಕುರಿತು ಮತ್ತು ಹಝ್ರತ್ ಅಬೂಅಯ್ಯೂಬ್(ರ)ರ ಮುಗ್ಧ ಪ್ರೀತಿಯನ್ನು ನೋಡಿ ಹಝ್ರತ್ ಪೈಗಂಬರ್(ಸ) ಅವರಿಗಾಗಿ ದುಆ ಮಾಡಿದ ಬಗ್ಗೆಯೂ ಪ್ರಸ್ತಾಪವಿದೆ. ಮರುದಿನ ಬಹಳ ಸರಳವಾದ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ)ರ ವಲೀಮ ನಡೆಯಿತು. ಮೂರು ದಿನಗಳು ತಂಗಿದ ನಂತರ ಅಲ್ಲಿಂದ ಹೊರಡಲಾಯಿತು. ಹಝ್ರತ್ ಸಫಿಯ(ರ)ರನ್ನು ಸ್ವತಂತ್ರಗೊಳಿಸಿದ್ದು ಅವರ ಹಖ್ ಮಹರ್ ಆಗಿ ನಿಶ್ಚಯಿಸಲಾಯಿತು. ಹಝ್ರತ್ ಸಫಿಯ(ರ) ಹೇಳುತ್ತಾರೆ: ಯಸ್‌ರಿಬಿನ ಕಡೆಯಿಂದ ಚಂದ್ರನು ಬಂದು ನನ್ನ ಚೀಲದಲ್ಲಿ ಬಿದ್ದದ್ದಾಗಿ ಹಝ್ರತ್ ಪೈಗಂಬರ್(ಸ)ರ ಆಗಮನಕ್ಕೆ ಸ್ವಲ್ಪ ದಿನಗಳ ಮುಂಚೆ ನಾನು ಕನಸನ್ನು ಕಂಡಿದ್ದೆ. ಹಝ್ರತ್ ಸಫಿಯ ಹಿಜರೀ 50ರಲ್ಲಿ ನಿಧನಗೊಂಡರು. ಜನ್ನತುಲ್ ಬಖೀಅ್‌ನಲ್ಲಿ ಅವರನ್ನು ದಫನ್ ಮಾಡಲಾಯಿತು.

ಹಝ್ರತ್ ಸಫಿಯ(ರ)ರ ವಿವಾಹದ ಬಗ್ಗೆ ಓರಿಯನ್‌ಟಲಿಸ್ಟರು ಕೆಟ್ಟದ್ದಾಗಿ ಆರೋಪ ಮಾಡುತ್ತಾರೆ. ಹಝ್ರತ್ ಸಫಿಯ(ರ)ರ ಸೌಂದರ್ಯದ ಪ್ರಶಂಸೆ ಕೇಳಿದಾಗ ಅವರನ್ನು ಹಝ್ರತ್ ಪೈಗಂಬರ್(ಸ) ಹಝ್ರತ್ ದಹಿಯ(ರ)ರಿಂದ ಮರಳಿ ಪಡೆದರು ಮತ್ತು ಸ್ವತಃ ಅವರನ್ನು ವಿವಾಹ ಮಾಡಿದರು ಎಂಬಿತ್ಯಾದಿಯಾಗಿ ಪಾಶ್ಚಾತ್ಯ ಬರಹಗಾರರು ಹೇಳುತ್ತಾರೆ. (ಈ ಸಂಬಂಧಪಟ್ಟು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರ ಒಂದು ನಿರ್ದೇಶನವನ್ನು ಕೂಡ ಹುಝೂರ್ ಮುಂದಿರಿಸಿದರು.) ದೇಶದಲ್ಲಿ ಶಾಂತಿ ಮತ್ತು ಸಮಾಧಾನ ಸ್ಥಾಪಿಸಲು ಮತ್ತು ಜಯಿಸಲಾದ ದೇಶದ ಜನರ ಜೊತೆಗೆ ಸ್ನೇಹ ಸಂಬಂಧವನ್ನು ಉಂಟುಮಾಡಲಿಕ್ಕಾಗಿ ಆ ದೇಶದ ಸರದಾರನ ಪುತ್ರಿ ಅಥವಾ ಪತ್ನಿಯನ್ನು ವಿವಾಹ ಮಾಡುವುದು ಅರಬ್ ದೇಶದ ಸಂಪ್ರದಾಯವಾಗಿತ್ತು. ಇದರಿಂದ ಎಲ್ಲ ಪ್ರಜೆಗಳು ಮತ್ತು ಅರಸನ ಕುಟುಂಬ ಸಮಾಧಾನಗೊಳ್ಳುತ್ತಿದ್ದರು.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ) ವಿವಾಹ ಮಾಡಲು ತೀರ್ಮಾನಿಸಿದ ಮೂಲ ಕಾರಣವು ಸಾಮಾನ್ಯವಾಗಿ ಹೇಳಲಾಗುವ ವಿಷಯಗಳಲ್ಲ. ನಿಜವಾದ ಮೂಲ ಕಾರಣ ದೈವಿಕ ಆಜ್ಞೆಯಾಗಿರಬಹುದು. ಹಝ್ರತ್ ಪೈಗಂಬರ್(ಸ)ರ ಯಾವುದೇ ಚಲನವಲನಗಳು ದೈವಿಕ ಇಂಗಿತವಿಲ್ಲದೇ ಆಗುತ್ತಿರಲಿಲ್ಲ. ಅಲ್ಲಾಹನು ಸ್ವತಃ ಹೀಗೆ ಹೇಳಿದ್ದಾನೆ: 'ಹೇಳು, ನನ್ನ ಆರಾಧನೆ, ನನ್ನ ತ್ಯಾಗಗಳು, ನನ್ನ ಜೀವನ, ನನ್ನ ಮರಣ ಸಕಲ ಲೋಕಗಳ ಪ್ರಭುವಾದ ಅಲ್ಲಾಹನಿಗೆ ಆಗಿದೆ.' ಯಾರು ಎಲ್ಲ ಕಾರ್ಯಗಳನ್ನು ಅಲ್ಲಾಹನಿಗಾಗಿ ಮಾಡುತ್ತಾರೋ, ಯಾರ ಮಾರ್ಗದರ್ಶನವನ್ನು ಪ್ರತಿಯೊಂದು ಕ್ಷಣವೂ ಸಿಂಹಾಸನದ ಪ್ರಭು ಮಾಡುತ್ತಾನೋ, ಅವರು ಇಷ್ಟು ದೊಡ್ಡ ನಿರ್ಧಾರವನ್ನು ಸ್ವತಃ ಹೇಗೆ ಮಾಡುವರು? ಆದ್ದರಿಂದ ಈ ಎಲ್ಲ ವಿವಾಹಗಳನ್ನು ಹಝ್ರತ್ ಪೈಗಂಬರ್(ಸ) ಅಲ್ಲಾಹನಿಗಾಗಿ ಮಾಡಿದ್ದರು. ಹೇಗಿದ್ದರೂ ಅವುಗಳ ಪರಿಣಾಮಗಳು ಅತ್ಯಂತ ಅನುಗ್ರಹೀತ ಯುಕ್ತಿಗಳನ್ನು ಒಳಗೊಂಡಿದ್ದುವು.

ಹಝ್ರತ್ ಮಸೀಹ್ ಮೌಊದ್(ಅ) ತನ್ನ ಒಂದು ಗ್ರಂಥವಾದ ಆಯೀನ ಕಮಾಲಾತೆ ಇಸ್ಲಾಮ್‌ನಲ್ಲಿ ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಯಾವುದೇ ಕೆಲಸ ಮತ್ತು ಯಾವುದೇ ಮಾತು ದಿವ್ಯವಾಣಿ ಒಳಗೊಳ್ಳದ್ದಾಗಿ ಇಲ್ಲವೆಂದು ಸಹಾಬಿಯರು ನಿಸ್ಸಂದೇಹವಾಗಿಯೂ ನಂಬಿಕೆ ಇರಿಸಿದ್ದರು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾರೆ: ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ: ನಾನು ಹೇಳುವ ಮಾತು ಮತ್ತು ನಾನು ಮಾಡುವ

ಕೃತ್ಯ ಎಲ್ಲವೂ ಅಲ್ಲಾಹನ ಕಡೆಯಿಂದ ಆಗಿವೆ. ಹದೀಸುಗಳ ಗ್ರಂಥಗಳಲ್ಲಿ ಕೆಲವು ಕಾರ್ಯಗಳಲ್ಲಿ ಹಝ್ರತ್ ಪೈಗಂಬರ್(ಸ)ರ ತಪ್ಪುಗ್ರಹಿಕೆಯ ಪ್ರಸ್ತಾಪವೂ ಇದೆ. ಹಝ್ರತ್ ಪೈಗಂಬರ್(ಸ)ರ ಎಲ್ಲ ಮಾತುಗಳು ಮತ್ತು ಕೃತ್ಯಗಳು ದಿವ್ಯವಾಣಿ ಮೂಲಕವಾಗಿದ್ದರೆ ಆ ಪ್ರಮಾದಗಳು ಹೇಗಾಯಿತು ಎಂದು ಕೇಳುವುದಾದರೆ, ಅದರ ಉತ್ತರವೇನೆಂದರೆ, ನಾವು ಆ ತಪ್ಪುಗ್ರಹಿಕೆಯನ್ನು ಕೂಡ ದಿವ್ಯವಾಣಿಯಿಂದ ಬೇರ್ಪಡಿಸುವುದಿಲ್ಲ. ಏಕೆಂದರೆ ಅವು ಸಾಮಾನ್ಯ ಸಂಗತಿಗಳಾಗಿರಲಿಲ್ಲ. ಕೆಲವೊಮ್ಮೆ ಅಲ್ಲಾಹನು ಕೆಲವು ಕಾರಣಗಳಿಗಾಗಿ ಪ್ರವಾದಿಗಳ ಬುದ್ಧಿ ಮತ್ತು ವಿವೇಕವನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಆಗ ಯಾವುದಾದರೂ ಮಾತು ಮತ್ತು ಕೃತ್ಯ ಮರೆವು ಅಥವಾ ತಪ್ಪಿನ ರೂಪದಲ್ಲಿ ಅವರಿಂದ ನಡೆಯುತ್ತದೆ ಮತ್ತು (ಅಲ್ಲಾಹನು) ಉದ್ದೇಶಪೂರ್ವಕವಾಗಿ ಮಾಡಿಸಿದ ಆ ಯುಕ್ತಿಯು ಪ್ರಕಟವಾಗುತ್ತದೆ. ಆಗ ದಿವ್ಯವಾಣಿಯ ನದಿ ಜೋರಾಗಿ ಹರಿಯಲು ತೊಡಗುತ್ತದೆ ಮತ್ತು ಆ ತಪ್ಪನ್ನು ಅದು ಇರಲೇ ಇಲ್ಲವೆಂಬಂತೆ ಮಧ್ಯದಿಂದ ತೆಗೆದುಬಿಡಲಾಗುತ್ತದೆ. ನಮ್ಮ ಯಜಮಾನರಾದ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುಮಾರು ಹತ್ತು ಲಕ್ಷದಷ್ಟು ಮಾತುಗಳು ಮತ್ತು ಕೃತ್ಯಗಳಲ್ಲಿ ಪೂರ್ಣವಾಗಿಯೂ ದೈವಿಕ ಪ್ರಕಾಶ ಕಾಣಲ್ಪಡುತ್ತಿರುವಾಗ ಮತ್ತು ಪ್ರತಿಯೊಂದು ಮಾತಿನಲ್ಲಿ, ಚಲನವಲನದಲ್ಲಿ, ಕೃತ್ಯಗಳಲ್ಲಿ ರೂಹುಲ್ ಖುದ್‌ಸಿನ ಬೆಳಗುವ ಪ್ರಕಾಶಗಳು ಕಾಣಲ್ಪಡುತ್ತಿರುವಾಗ ಒಂದೆರಡು ಮಾತಿನಲ್ಲಿ ಮಾನುಷಿಕವಾದ ಲಕ್ಷಣಗಳು ಕಂಡುಬಂದರೆ ಅದರಿಂದ ಯಾವ ನಷ್ಟವಿದೆ? ಬದಲಿಗೆ ಮನುಷ್ಯನು ಎಂಬ ನೆಲೆಯಲ್ಲಿ ಕೆಲವೊಮ್ಮೆ ಹೀಗೆಯೂ ಆಗಲೇ ಬೇಕಿತ್ತು. ಜನರು ಶಿರ್ಕಿನ ವಿಪತ್ತಿಗೆ ಒಳಗಾಗದೇ ಇರಲಿಕ್ಕಾಗಿ ಅದು ಅಗತ್ಯವಾಗಿದೆ.

ಆದ್ದರಿಂದ ಯಾವುದೇ ಹದೀಸಿನ ಅಥವಾ ಚರಿತ್ರೆಯ ಗ್ರಂಥಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಜೀವಿತದ ಕುರಿತು ಯಾವುದಾದರೂ ವರದಿ ಇದ್ದರೆ, ಮೇಲೆ ಪ್ರಸ್ತಾಪಿಸಲಾದ ಪವಿತ್ರ ಖುರ್‌ಆನಿನ ವಚನದ ಬೆಳಕಿನಲ್ಲಿ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಲಿಖಿತಗಳ ಬೆಳಕಿನಲ್ಲಿ ಅವುಗಳನ್ನು ನೋಡಬೇಕು ಮತ್ತು ವಿಶ್ಲೇಷಿಸಬೇಕು. ಅದರ ಬದಲಿಗೆ ಆರೋಪ ಹೊರಿಸುವುದು ಮತ್ತು ಪ್ರತಿಯೊಬ್ಬ ಓರಿಯನ್ಟಲಿಸ್ಟನ ಮಾತನ್ನು ನಂಬಿಕೊಂಡು ನಮಗೆ ಇದಕ್ಕೆ ಉತ್ತರವಿಲ್ಲವೆಂದು ಭಾವಿಸುವುದು ಸರಿಯಲ್ಲ. ಹಝ್ರತ್ ಪೈಗಂಬರ್(ಸ)ರ ಪರಿಶುದ್ಧತೆಯನ್ನು ನೆಲೆನಿಲ್ಲಿಸುವ ಪ್ರಧಾನ ಕೆಲಸ ಇದಾಗಿದೆ. ಅಲ್ಲದೆ ಕೇವಲ ಘೋಷಣೆ ಕೂಗುವುದಲ್ಲ.

(ಹುಝೂರ್ ಹೇಳಿದರು:) ಎರಡು ದಿನಗಳ ನಂತರ ರಮಝಾನ್ ಆರಂಭವಾಗುತ್ತಿದೆ. ಅಲ್ಲಾಹನು ಪ್ರತಿಯೊಬ್ಬರಿಗೂ ರಮಝಾನಿನಿಂದ ಸಂಪೂರ್ಣವಾದ ಪ್ರಯೋಜನವನ್ನು ಪಡೆಯಲು ಸೌಭಾಗ್ಯ ನೀಡಲಿ. ಅದಕ್ಕಾಗಿ ದುಆ ಮತ್ತು ಪ್ರಯತ್ನ ಸಹ ಮಾಡಬೇಕು. (ಖುತ್ಬದ ಕೊನೆಯಲ್ಲಿ ಹುಝೂರ್ ಇತ್ತೀಚೆಗೆ ನಿಧನರಾದ ಸನ್ಮಾನ್ಯ ಚೌಧರಿ ಮುಹಮ್ಮದ್ ಇಸ್ಲಾಮ್ ಸಾಹಿಬ್‌ರ ಪುತ್ರ ಸನ್ಮಾನ್ಯ ಚೌಧರಿ ಮುಹಮ್ಮದ್ ಅನ್ವರ್ ರಿಯಾಝ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗ್ವಾಯಿಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔


***Friday Sermon delivered by Hadrath Khaleefatul Masih Al Khamis***$^{(atba)}$

At, ***'Masjid Mubarak'***, *Islamabad*, *Tilford*, U.K. On 28-02-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon